ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ:ಪಮೂಶಿಇ/ಶೈಶಾ/ಪ್ರ.ಪಿ.ದಾ/2021-22 ದಿನಾಂಕ23 -09-2021.

**ಸುತ್ತೋಲೆ**

ವಿಷಯ: 2021-22ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿ ದಿನಾಂಕವನ್ನು ದಂಡ ಶುಲ್ಕದೊಂದಿಗೆ ವಿಸ್ತರಿಸುವ ಕುರಿತು.

ಉಲ್ಲೇಖ: 1) ಪಮೂಶಿ/ಶೈಶಾ/ಪ್ರ.ಪಿ.ದಾ/2021-22 ದಿನಾಂಕ: 10/08/2021.
2) ಪಮೂಶಿ/ಶೈಶಾ/ಪ್ರ.ಪಿ.ದಾ/2021-22 ದಿನಾಂಕ:13/08/2021.
3) ಪಮೂಶಿ/ಶೈಶಾ/ಪ್ರ.ಪಿ.ದಾ/2021-22 ದಿನಾಂಕ:31/08/2021.
4) ಚುನಾಯಿತ ಪ್ರತಿನಿಧಿಗಳು, ಪ್ರಾಂಶುಪಾಲರು ಹಾಗೂ ಪೋಷಕರ ಮನವಿ.

*****

2021-22ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿಗೆ ಸಂಬಂಧಿಸಿದಂತೆ ಉಲ್ಲೇಖ-03ರಲ್ಲಿ ದಾಖಲಾತಿ ದಿನಾಂಕವನ್ನು 05/10/2021ರ ವರೆಗೆ ವಿಸ್ತರಿಸಲಾಗಿತ್ತು. ಉಲ್ಲೇಖ-04ರಲ್ಲಿ ಚುನಾಯಿತ ಪ್ರತಿನಿಧಿಗಳು, ಪ್ರಾಂಶುಪಾಲರು ಹಾಗೂ ಪೋಷಕರ ಮನವಿಯ ಮೇರೆಗೆ **ಪ್ರಥಮ ಪಿಯುಸಿ ತರಗತಿಗಳಿಗೆ ಮಾತ್ರ** ಅನುಕೂಲವಾಗುವಂತೆ ದಾಖಲಾತಿ ದಿನಾಂಕವನ್ನು ದಂಡ ಶುಲ್ಕಗಳೊಂದಿಗೆ ಈ ಕೆಳಕಂಡಂತೆ ವಿಸ್ತರಿಸಿದೆ.

| ತರಗತಿ | ವಿಳಂಬ ದಾಖಲಾತಿ ರೂ. 670/- (ರೂ. ಆರುನೂರ ಎಪ್ಪತ್ತು ಮಾತ್ರ) ದಂಡ ಶುಲ್ಕದೊಂದಿಗೆ (ಎರಡೂ ದಿನಗಳು ಸೇರಿವೆ)(ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು) | ವಿಶೇಷ ದಂಡ ಶುಲ್ಕ ರೂ. 2890/- (ರೂ 2220/- ಎರಡು ಸಾವಿರದ ಎರಡು ನೂರ ಇಪ್ಪತ್ತು + ರೂ. 670/- ಆರು ನೂರ ಎಪ್ಪತ್ತು ಮಾತ್ರ) ಎರಡೂ ದಿನಗಳು ಸೇರಿವೆ(ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು) |
|---|---|---|
| ಪ್ರಥಮ ಪಿಯುಸಿ | **13/09/2021 ರಿಂದ 05/10/2021** | **07/10/2021ರಿಂದ 19/10/2021** |

**2021-22ರ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ದಾಖಲಾತಿ ಶುಲ್ಕಗಳನ್ನು ಸಂಗ್ರಹಿಸುವುದು. ಈ ರೀತಿ ಸಂಗ್ರಹಿಸಿದ ಶುಲ್ಕಗಳನ್ನು ಸರ್ಕಾರ/ಇಲಾಖೆಗೆ ದಾಖಲಾತಿ ದಿನಾಂಕ ಮುಗಿದ ಮಾರನೇ ಕಾರ್ಯನಿರತ ದಿನಾಂಕದಂದು (ದಂಡ ಶುಲ್ಕ ಹಾಗೂ ವಿಶೇಷ ದಂಡ ಶುಲ್ಕ) ಖಜಾನೆಗೆ ಶುಲ್ಕಗಳನ್ನು ಕಡ್ಡಾಯವಾಗಿ ಜಮೆ ಮಾಡುವುದು. ಈ ಸಂಬಂಧ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಪೂರ್ಣ ಜವಾಬ್ದಾರರಾಗಿರುತ್ತಾರೆ ಎಂದು ಸೂಚಿಸಿದೆ.**

Snehal

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಉಪ ನಿರ್ದೇಶಕರ

ಮೂಲಕ.

3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಜಿಲ್ಲಾ ಉಪ ನಿರ್ದೇಶಕರುಗಳ ಇ-ಮೇಲ್‌ಗೆ ಅಳವಡಿಸಲು.
4. ಕಛೇರಿ ಪ್ರತಿ.